1	2	3	4
21	ಕೊಂಪನಪಲ್ಲಿ	ಚೆಕ್‌ಡ್ಯಾಂ–1	0 300
22.	ಹಣಮನಳ್ಳಿ	ಚೆಕ್‌ಡ್ಯಾಂ -1	0 650
		ಒಟ್ಟು	**15 501**

ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಇನ್ನು ಮುಂದೆ ಆರಂಭಿಕ ಚಟುವಟಿಕೆ, ತರಬೇತಿ, ಅರಣ್ಯ ಮತ್ತು ತೋಟಗಾರಿಕೆ (ಮುಂಗಡ ಕೆಲಸ) ಹಾಗೂ ಭೂಸಾರ ಸಂರಕ್ಷಣ ಕಾಮಗಾರಿಗಳನ್ನು ರೂ 8 219 ಲಕ್ಷಗಳಿಗೆ ತೆಗೆದುಕೊಳ್ಳಲಾಗುವುದು

ನಬಾರ್ಡ್ ಯೋಜನೆಯಡಿ ರೂ 1 77 ಲಕ್ಷಗಳ ಕಾಮಗಾರಿಗಳನ್ನು ತಗೆಯಕೊಳ್ಳಬೇಕಾಗಿದೆ

ಸೂಚನೆ ಸಪಾ–ಸಮಪಾತಳಿ ಬದು, ತಿ ಗಾ ತಿರುವುಗಾಲುವೆ, ಬಿಸಿ–ಬೋಲ್ಡರ್ ಚೆಕ್, ಆರ್ ಸಿ–ರಬಲ್ ಚೆಕ್, ಸಿಡಿ- ಡ್ಯಾಂ ಆರ್‌ವಿಪಿ ರಿವರ್ ವ್ಯಾಲಿ ಪ್ರಾಜೆಕ್ಟ್ ಡಿಪಿಎಪಿ ಬರಪೀಡಿತ ಪ್ರದೇಶಾಬಿವೃದ್ಧಿ ಯೋಜನೆ ಐಡಬ್ಲ್ಯೂಡಿಪಿ ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆ, ಆರ್ ಆರ್ ಎಸ್–ಎಎಸ್ ರೆಕ್ಲಿಮೇಶನ್ ಸ್ಟ್ರಕ್ಚರ್ ವಿಸಿಡಿ–ವೆಜಿಟೆಟಿವ್ ಚೆಕ್ ಡ್ಯಾಂಎನ್‌ಟಿ– ನಾಲ ಟ್ರೈನಿಂಗ್ ಡಬ್ಲ್ಯು ಡಬ್ಲು ವೇಸ್ಟ್ ವೇರ್

ಷೋರಾಪುರ ತಾಲ್ಲೂಕಿನಲ್ಲಿ ಬರಗಾಲದಿಂದ ಉಂಟಾದ ನಷ್ಟದ ಬಗ್ಗೆ

524 (152) ಶ್ರೀ ರಾಜಾರಾವೆಂಕಟಪ್ಪ ನಾಯಕ್ (ಷೋರಾಪುರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಷೋರಾಪುರ ತಾಲ್ಲೂಕಿನಲ್ಲಿ ಮಳೆಯ ಅಭಾವದ ಕಾರಣ ರೈತರು ಬೆಳೆದಿರುವ ಬೆಳೆಗಳಿಗೆ ಪೂರ್ಣ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಷೋರಾಪುರ ತಾಲ್ಲೂಕಿನಲ್ಲಿ ರೈತರು ಬೆಳೆದಿರುವ ಬೆಳೆ ನಷ್ಟಕ್ಕೆ ಪರಿಹಾರ ನೀಡುವ ಬಗ್ಗೆ ಸರ್ಕಾರ ತೀರ್ಮಾನಿಸಿದೆಯೇ?

ಶ್ರೀ ಎ ಎಸ್ ಕೌಜಲಗಿ (ಕೃಷಿ ಸಚಿವರು)

ಅ) ಬಂದಿದೆ ಶೋರಾಪುರ ತಾಲ್ಲೂಕಿನಲ್ಲಿ ಪ್ರಸಕ್ತ ಸಾಲಿನ ಮುಂಗಾರು ಹಾಗೂ ಹಿಂಗಾರು ಹಂಗಾಮುಗಳಲ್ಲಿ ಮಳೆಯ ಅಭಾವವಿತ್ತು, ಬರಗಾಲದಿಂದ ಸುಮಾರು 26492 ಹೆಕ್ಟೇರ್ ವಿಸ್ತೀರ್ಣದಲ್ಲಿ ಮುಂಗಾರು ಹಾಗೂ ಹಿಂಗಾರು ಬೆಳೆಗಳು ಹಾನಿಗೊಳಪಟ್ಟಿರುತ್ತದೆ

ಆ) ಬೆಳೆ ವಿಮೆ ಯೋಜನೆಯಡಿಯಲ್ಲಿ ನೋಂದಾಯಿಸಿದ ರೈತರಿಗೆ ಬೆಳೆಗಳ ಇಳುವರಿಯಲ್ಲಿ ಉಂಟಾಗಿರುವ ನಷ್ಟದ ಆಧಾರದ ಮೇಲೆ ಬೆಳೆ ವಿಮೆ ಪರಿಹಾರವನ್ನು ನೀಡಲಾಗುವುದು

ರಾಜ್ಯದ ಗ್ರಾಮೀಣ ಸಾರಿಗೆ ವ್ಯವಸ್ಥೆ

567 (452) ಶ್ರೀ ಅಪ್ಪಚ್ಚು ರಂಜನ್ ಎಂ ಪಿ (ಸೋಮವಾರಪೇಟೆ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಇತ್ತೀಚೆಗೆ ಗ್ರಾಮೀಣ ಸಾರಿಗೆ ಸೌಲಭ್ಯದ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿದೆಯೇ,

ಆ) ಯಾವ ಯಾವ ವಿಭಾಗಗಳಿಗೆ ಎಷ್ಟೆಷ್ಟು ಗ್ರಾಮೀಣ ಸಾರಿಗೆ ಬಸ್‌ಗಳನ್ನು ಬಿಡಲಾಗಿದೆ (ವಿಭಾಗವಾರು, ಘಟಕಗಳವಾರು ವಿವರ ತಿಳಿಸುವುದು).

ಇ) ಕೊಡಗು ಜಿಲ್ಲೆಯಲ್ಲಿರುವ ವಿಭಾಗಗಳ ಹಾಗೂ ಘಟಕಗಳ ಸಂಖ್ಯೆ ಎಷ್ಟು, ಇಲ್ಲಿಗೆ ಸದರಿ ಬಸ್ಸುಗಳಲ್ಲಿ ಎಷ್ಟನ್ನು ಒಡಿಸಲಾಗುತ್ತಿದೆ

ಈ) ಯಾವ ಯಾವ ಮಾರ್ಗಗಳಲ್ಲಿ ಈ ಬಸ್ ಕಾರ್ಯಾಚರಣೆಯಾಗುತ್ತಿದೆ.

ಉ) ಹೊಸದಾಗಿ ಓಡಿಸಲು ಉದ್ದೇಶಿಸಿರುವ ಬಸ್ ಮಾರ್ಗಗಳಾವುವು, ಬಿಡಲು ಉದ್ದೇಶಿಸಿರುವ ಬಸ್‌ಗಳ ಸಂಖ್ಯೆ ಎಷ್ಟು?

ಶ್ರೀ ಬಿ ರಮಾನಾಥ್ ರೈ (ಸಾರಿಗೆ ಸಚಿವರು)

ಅ) ಹೌದು

ಆ) ಅನುಬಂಧ–ಎ ನಲ್ಲಿ ಒದಗಿಸಲಾಗಿದೆ

ಇ) ಘಟಕ –1 ಬಸ್ಸುಗಳು–2

ಈ) 1) ಮಡಿಕೇರಿ–ನಾಪೋಕ್ಲು ಮಡಿಕೇರಿ
2) ಮಡಿಕೇರಿ–ಕುಶಾನಗರ–ಮಡಿಕೇರಿ
3) ಮಡಿಕೇರಿ–ಬೆಟ್ಟತ್ತೂರು ಮಡಿಕೇರಿ

ಉ) ಹೊಸ ಮಾರ್ಗಗಳನ್ನು ಹಾಗೂ ಬಸ್ ಸಂಖ್ಯೆಗಳನ್ನು ಇನ್ನೂ ನಿರ್ಧರಿಸಬೇಕಾಗಿದೆ

ಅನುಬಂಧ–ಎ

ಕ ರಾ ರ ಸಾ ಸಂ

ಕ್ರ ಸಂ	ವಿಭಾಗ	ಘಟಕ	ಗ್ರಾಮೀಣ ಸಾರಿಗೆ ಬಸ್‌ಗಳ ಸಂಖ್ಯೆ
1	2	3	4
1	ಬೆಂಗಳೂರು (ಕೇಂದ್ರ)	ಬೆಂಗಳೂರು-III	3
		ಬೆಂಗಳೂರು-IV	2
2	ಬೆಂಗಳೂರು ಗ್ರಾಮಾಂತರ	ಕನಕಪುರ	3
3	ಕೋಲಾರ	ಕೋಲಾರ	2
		ಚಿಕ್ಕಬಳ್ಳಾಪುರ	4
		ಶ್ರೀನಿವಾಸಪುರ	1
		ಕೆ ಜಿ ಎಫ್	1
		ಬಾಗೇಪಲ್ಲಿ	2
4	ತುಮಕೂರು	ಕುಣಿಗಲ್	2
		ತುಮಕೂರು	1
		ಶಿರಾ	3

1	2	3	4
2.	ಯಾದಗಿರಿ	ಯಾದಗಿರಿ	48
		ಶಹಾಪುರ	63
		ಚಿತ್ತಾಪುರ	42
3	ಬೀದರ್	ಬೀದರ್	73
		ಹುಮನಾಬಾದ್	47
		ಬಸವಕಲ್ಯಾಣ	32
		ಭಾಲ್ಕಿ	41
4	ರಾಯಚೂರು	ರಾಯಚೂರು ಘಟಕ–1	39
		ರಾಯಚೂರು ಘಟಕ–2	47
		ಲಿಂಗಸುಗೂರು	61
		ಸಿಂಧನೂರ	43
		ಮಾನವಿ	36
5	ಕೊಪ್ಪಳ	ಕೊಪ್ಪಳ	33
		ಕುಷ್ಟಗಿ	30
		ಯಲಬುರ್ಗಾ	24
		ಗಂಗಾವತಿ	25
6	ಬಳ್ಳಾರಿ	ಬಳ್ಳಾರಿ ಘಟಕ–1	53
		ಬಳ್ಳಾರಿ ಘಟಕ–2	24
		ಹೊಸಪೇಟೆ	55
		ಕೂಡ್ಲಗಿ	48
			31

ಹಿರೇಕೆರೂರು ಕ್ಷೇತ್ರದ ಹಳ್ಳೂರು ಗ್ರಾಮದಲ್ಲಿ 33 ಕೆ ವಿ ಸಬ್ ಸ್ಟೇಷನ್ ಸ್ಥಾಪನೆಯ ಬಗ್ಗೆ

584 (822) ಶ್ರೀ ಬಿ ಹೆಚ್ ಬನ್ನಿಕೋಡ್ (ಹಿರೇಕೆರೂರು) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿದ್ಯುತ್ ತೊಂದರೆಯಿಂದ ಸಂಕಷ್ಟಕ್ಕೆ ಈಡಾಗಿ ಆಗಾಗ ಧರಣಿ ಸತ್ಯಾಗ್ರಹಗಳ ಮೂಲಕ ಗಮನ ಸೆಳೆದಿರುವುದನ್ನು ಸರ್ಕಾರ ಗಮನಿಸಿದೆಯೇ

ಆ) ಹಿರೇಕೆರೂರು ತಾಲ್ಲೂಕಿನ ಹಳ್ಳೂರು ಗ್ರಾಮದ ಹತ್ತಿರ ಹೊಸದಾಗಿ 33 ಕೆ ವಿ ಸಬ್ ಸ್ಟೇಷನ್ ಕಾಮಗಾರಿ ನಿಗದಿತ ಸಮಯದಲ್ಲಿ ಪೂರ್ಣಗೊಳ್ಳದೇ ವಿಳಂಬಕ್ಕೆ ಕಾರಣಗಳೇನು

ಇ) ಹಳ್ಳೂರು ಸಬ್ ಸ್ಟೇಷನ್ ಸ್ಥಾಪನೆ ಕಾರ್ಯ ಪೂರ್ಣಗೊಳಿಸಲು ಇಲಾಖೆ ತೆಗೆದುಕೊಂಡ ಕ್ರಮಗಳೇನು ಆದ ಪ್ರಗತಿ ಏನು